

ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ನಡೆಯುತ್ತಿರುವ 'ಪ್ರೊ ಕಬಡ್ಡಿ' ಪಂದ್ಯದಲ್ಲಿ 'ಯುಪಿ ಯೋಧಾ' ಜಾಲಕ್ಕೆ ಸಿಕ್ಕಿರುವ 'ಯು ಮುಂಬಾ'ದ ಆಶಿಶ್.
ಫೋಟೊ: ಬಿ.ಎಚ್‌. ಶಿವಕುಮಾರ್

ಬುಲ್ಸ್' ತಂಡದ ಮಾಜಿ ಆಟಗಾರ ಪವನ್ ಶೆರಾವತ್ ಅವರು 'ತಮಿಳು ತಲೈವಾಸ್' ತಂಡಕ್ಕೆ ₹2.26 ಕೋಟಿಗೆ ಮಾರಾಟವಾದರು. ಇದು ಈ ಸಲ ಆಟಗಾರನಿಗೆ ಸಿಕ್ಕ ಗರಿಷ್ಠ ಮೊತ್ತವೂ ಹೌದು.

'ಬುಲ್ಸ್' ಪಾಲಾದ ವಿಕಾಸ್ ಖಂಡೋಲಾ ₹1.70 ಕೋಟಿ ಪಡೆದರು. 'ಯು.ಪಿ. ಯೋಧಾ' ತಂಡದ ಪ್ರದೀಪ್ ನರ್ವಾಲ್ ₹1.65 ಕೋಟಿ, 'ಹರಿಯಾಣ ಸ್ಟೀಲರ್ಸ್'ನ ಮೊನಾ ಗೊಯಾತ್ ₹1.51 ಕೋಟಿ, 'ತೆಲುಗು ಟೈಟನ್ಸ್'ನ ಸಿದ್ದಾರ್ಥ ದೇಸಾಯಿ ₹1.45 ಕೋಟಿ, 'ಪುಣೇರಿ ಪಲ್ಟನ್'ನ ಫಜಲ್ ಅತ್ರಾಚಲಿ ₹1.38 ಕೋಟಿ, 'ತೆಲುಗು ಟೈಟನ್ಸ್' ರಾಹುಲ್ ಚೌಧರಿ ₹1.29 ಕೋಟಿ, 'ಯು ಮುಂಬಾ'ದ ಗುಮನ್ ಸಿಂಗ್ ₹1.22 ಕೋಟಿ, 'ಪುಣೇರಿ ಪಲ್ಟನ್'ನ ನಿತಿನ್ ತೋಮಾರ್ ₹1.20 ಕೋಟಿ ಮತ್ತು 'ಜೈಪುರ ಪಿಂಕ್ ಪ್ಯಾಂಥರ್ಸ್'ನ ದೀಪಕ್ ಹೂಡಾ ₹1.15 ಕೋಟಿ ವೀರರಾಗಿದ್ದಾರೆ. ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದ ಟೂರ್ನಿಗಳಲ್ಲಿ ಆಟವಾಡದ ಅನೇಕ ಆಟಗಾರರ ಮೂಲ ಬೆಲೆಯೇ ₹10 ಲಕ್ಷದಿಂದ ₹30 ಲಕ್ಷದ ತನಕ ನಿಗದಿ ಮಾಡಲಾಗಿತ್ತು. ತಮ್ಮ ಸ್ವಂತ ಹಣ ಖರ್ಚು ಮಾಡಿಕೊಂಡು ರಾಜ್ಯಮಟ್ಟದ ಟೂರ್ನಿಗಳಲ್ಲಿ ಪಂದ್ಯಗಳನ್ನು ಆಡಿ ಬರುತ್ತಿದ್ದ ಆಟಗಾರರಿಗೆ 'ಪ್ರೊ ಕಬಡ್ಡಿ'ಯಿಂದಾಗಿ ಪಂದ್ಯವಾಡುವ ಮೊದಲೇ ಲಕ್ಷಗಳ ಲೆಕ್ಕದಲ್ಲಿ ಹಣ ಕೈ ಸೇರತೊಡಗಿದೆ.

ಪ್ರಚಾರ, ಪ್ರಾಯೋಜತ್ವಕ ಹೆಚ್ಚಾದಂತೆಲ್ಲ

## ತಾರಾಪಟ್ಟ ಕೊಟ್ಟ ಆಟದಿಂದಲೇ ಭವಿಷ್ಯದ ಆತಂಕ



ಪ್ರೊ. ಕಬಡ್ಡಿಯಿಂದ ಆಟಗಾರರಿಗೆ ತಾರಾಪಟ್ಟ ಹಾಗೂ ಹಣ ಲಭಿಸಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ, ನಿರಂತರವಾಗಿ ಮ್ಯಾಟ್ ಮೇಲೆ ಪಂದ್ಯಗಳನ್ನು ಆಡುತ್ತಿರುವ ಕಾರಣ ಆಟಗಾರರಿಗೆ ಭವಿಷ್ಯದ ಆತಂಕ ಕಾಡುತ್ತಿದೆ.

1980–90ರ ದಶಕದಲ್ಲಿ ಕಬಡ್ಡಿಯನ್ನು ಹಣಕ್ಕಾಗಿ ಆಡಿಲ್ಲ. ದೇಶಕ್ಕಾಗಿ ಆಡಿದ್ದೆವು. ಅಂತರರಾಷ್ಟ್ರೀಯ ಮಟ್ಟದ ಪ್ರಶಸ್ತಿಗಳನ್ನು ಗೆದ್ದಾಗ ಸರ್ಕಾರವೂ ಹಣ ಕೊಡುತ್ತಿತ್ತು. ಆದರೆ, ಆ ಮೊತ್ತ ಬಹಳ ಕಡಿಮೆ ಪ್ರಮಾಣದಲ್ಲಿತ್ತು. ಆಟವನ್ನು ಹಾಗೂ ದೇಶವನ್ನು ಪ್ರೀತಿಸುವುದು ಆಟಗಾರನಿಗೆ ಅಗತ್ಯ. ಪ್ರೊ ಕಬಡ್ಡಿಯಲ್ಲಿ ಆಡಿದರೆ ಮಾತ್ರ ಸ್ಟಾರ್ ಆಗಲು ಆಗುವುದಿಲ್ಲ. ಪ್ರೊ ಕಬಡ್ಡಿಯ ಪಂದ್ಯಗಳನ್ನು ಟಿವಿಯಲ್ಲಿ ವೈಭವದಿಂದ ತೋರಿಸುತ್ತಿರುವ ಕಾರಣಕ್ಕೆ ಆಟಗಾರರನಿಗೆ ತಾರಾ ಪಟ್ಟ ಲಭಿಸಿದೆಯೇ ಹೊರತು ದೇಶವನ್ನು ಪ್ರತಿನಿಧಿಸಿದ್ದಕ್ಕೆ ಅಲ್ಲ. ಪವನ್ ಶೆರಾವತ್‌ಗೆ 2 ಕೋಟಿ ಕೊಟ್ಟು ಖರೀದಿಸಿದಾಗ ದೇಶವೇ ಆತನ ಬಗ್ಗೆ ಮಾತನಾಡಿತು. ಆದರೆ, ಮ್ಯಾಟ್ ಮೇಲೆ ಆಡಿ ಕಾಲಿಗೆ ಪೆಟ್ಟು ಮಾಡಿಕೊಂಡ ಕಾರಣ ಆತನ ಅನುಪಸ್ಥಿತಿ ಕಾಡಿತು. ಗಾಯದ ಸಮಸ್ಯೆ ಕಾಡಿದಾಗ ಭವಿಷ್ಯದ ಪ್ರಶ್ನೆಯೂ ಎದುರಾಗುತ್ತದೆ.

ಫ್ರಾಂಚೈಸಿ ಆಧರಿತ ಟೂರ್ನಿಗಳಲ್ಲಿ ಆಟಗಾರರ ಬೆಳವಣಿಗೆಗಿಂತ ತಂಡಗಳ ಮಾಲೀಕರಿಗೆ ವಾಣಿಜ್ಯಕ ಲಾಭವೇ ಮುಖ್ಯವಾಗುತ್ತಿದೆ. ಶ್ರಮಪಟ್ಟು ಅಭ್ಯಾಸ ಮಾಡಿ ಸಿದ್ಧವಿರುವ ಆಟಗಾರರನ್ನು ಕಾರ್ಪೊರೇಟ್ ಕಂಪನಿಗಳು ಬಳಸಿಕೊಂಡು ಹಣ ಮಾಡುತ್ತಿವೆ. ಈ ಟೂರ್ನಿ ಆರಂಭವಾದ ಬಳಿಕ ಆಟಗಾರರ ಗಾಯದ ಸಮಸ್ಯೆ ಗಂಭೀರವಾಗಿದ್ದು, ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಆಡಲು ಆಟಗಾರರೇ ಸಿಗುತ್ತಿಲ್ಲ.

ಮೊದಲ ಎರಡು ಮೂರು ಆವೃತ್ತಿಗಳಲ್ಲಿ ಆಡುವಾಗ ಬಹಳಷ್ಟು ಆಟಗಾರರು ಮೊಣಕಾಲಿನ ಸುರಕ್ಷಾ ಪಟ್ಟಿ (ನೀ ಕ್ಯಾಪ್) ಹಾಕುತ್ತಿರಲಿಲ್ಲ. ಈಗ ಮೊದಲ ಪಂದ್ಯದಿಂದಲೇ ಹಾಕಿಕೊಂಡು ಆಡುವ ಸ್ಥಿತಿಗೆ ಬಂದಿದ್ದಾರೆ. ಪ್ರೊ ಕಬಡ್ಡಿಯಿಂದ ತಾರಾಪಟ್ಟ ಸಿಕ್ಕಿದೆಯಾದರೂ ದೇಶ ಪ್ರತಿನಿಧಿಸುವ ವಿಷಯ ಬಂದಾಗ ನಷ್ಟವೇ ಹೆಚ್ಚು. ದೇಶವೇ ಮೊದಲ ಆದ್ಯತೆಯಾಗಬೇಕು. ಪ್ರೊ ಕಬಡ್ಡಿ ಆಡಿದವರಿಗೆ ನೌಕರಿಯ ಅವಕಾಶಗಳು ಸಿಗುತ್ತಿಲ್ಲ. ಹಲವು ರಾಜ್ಯಗಳಲ್ಲಿ ಗ್ರಾಮೀಣ ಭಾಗದಲ್ಲಿ ಕಬಡ್ಡಿ ಆಡುವ ಮಕ್ಕಳ ಸಂಖ್ಯೆ ಕಡಿಮೆಯಾಗಿದೆ.

ಮಣ್ಣಿನ ಅಂಕಣದಲ್ಲಿ ತಿಂಗಳಾನುಗಟ್ಟಲೆ ಆಡಿದರೆ ಏನೂ ತೊಂದರೆಯಿಲ್ಲ. ಆಟಗಾರರಿಗೆ ರಾಜ್ಯ ಹಾಗೂ ದೇಶದ ವಿಚಾರವೇ ಲೆಕ್ಕಕ್ಕಿಲ್ಲದಂತಾಗಿದೆ. ದೇಶಕ್ಕೆ ಆಡದೇ ಹೋದರೆ ಅಂತರರಾಷ್ಟ್ರೀಯ ಆಟಗಾರ ಎನಿಸಿಕೊಳ್ಳುವುದೇ ಇಲ್ಲ.

ಏಷ್ಯನ್ ಕ್ರೀಡಾಕೂಟ, ವಿಶ್ವಕಪ್, ಏಷ್ಯನ್ ಚಾಂಪಿಯನ್‌ಷಿಪ್ ಟೂರ್ನಿಗಳಲ್ಲಿ ಭಾರತ ಪುರುಷರ ಕಬಡ್ಡಿ ತಂಡ ಆರಂಭಿಕ ಹಂತದಿಂದ ಚಾಂಪಿಯನ್ ಪಟ್ಟ ಅಲಂಕರಿಸುತ್ತಲೇ ಬಂದಿದೆ. ಪ್ರೊ ಕಬಡ್ಡಿ ಆರಂಭವಾದ ಕೆಲ ವರ್ಷಗಳ ಬಳಿಕ ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತದ ಹಿಡಿತ ಸಡಿಲಗೊಳ್ಳುತ್ತಿದೆ. 2018ರ ಏಷ್ಯನ್ ಕ್ರೀಡಾಕೂಟದಲ್ಲಿ ಮೂರನೇ ಸ್ಥಾನಕ್ಕೆ ಕುಸಿಯಿತು. ಇರಾನ್, ದಕ್ಷಿಣ ಕೊರಿಯಾ ಪ್ರಾಬಲ್ಯ ಮೆರೆದವು. ದೇಶವನ್ನು ಪ್ರತಿನಿಧಿಸುವ ವಿಷಯದಲ್ಲಿ ಈಗ ತೋರುತ್ತಿರುವ ನಿರ್ಲಕ್ಷ್ಯ ಮುಂದುವರಿದರೆ ಮುಂದೆ ಗುಣಮಟ್ಟದ ಆಟಗಾರರು ಸಿಗುವುದೇ ಕಷ್ಟವಾಗಬಹುದು.

**–ಸಿ. ಹೊನ್ನಪ್ಪಗೌಡ**
ಅಂತರರಾಷ್ಟ್ರೀಯ ಮಾಜಿ ಕಬಡ್ಡಿ ಆಟಗಾರ

### 12 ತಂಡಗಳಿಂದ ಪೈಪೋಟಿ

ಟೂರ್ನಿ ಆರಂಭವಾದ ಮೊದಲ ನಾಲ್ಕು ಆವೃತ್ತಿಗಳಲ್ಲಿ ಎಂಟು ತಂಡಗಳು ಪೈಪೋಟಿ ನಡೆಸಿದವು. 2017ರಿಂದ ತಂಡಗಳ ಒಟ್ಟು ಸಂಖ್ಯೆ 12ಕ್ಕೆ ಏರಿಕೆಯಾಯಿತು. ಬೆಂಗಳೂರು, ಪುಣೆ ಮತ್ತು ಹೈದರಾಬಾದ್‌ನಲ್ಲಿ ಪಂದ್ಯಗಳು ನಡೆಯುತ್ತಿವೆ. ಗೆಲುವು ಪಡೆದ ತಂಡಕ್ಕೆ 5 ಅಂಕ. ಪಂದ್ಯ ಟೈ ಆದರೆ ಉಭಯ ತಂಡಗಳಿಗೆ ತಲಾ 3 ಅಂಕಗಳನ್ನು ಹಂಚಿಕೆ ಮಾಡಲಾಗುತ್ತದೆ.

ಬೆಂಗಳೂರು ಬುಲ್ಸ್, ಜೈಪುರ ಪಿಂಕ್ ಪ್ಯಾಂಥರ್ಸ್, ದಬಂಗ್ ಡೆಲ್ಲಿ, ಬೆಂಗಾಲ್ ವಾರಿಯರ್ಸ್, ಹರಿಯಾಣ ಸ್ಟೀಲರ್ಸ್, ಯುಪಿ ಯೋಧಾ, ಗುಜರಾತ್ ಜೈಂಟ್ಸ್, ತಮಿಳ್ ತಲೈವಾಸ್, ತೆಲುಗು ಟೈಟನ್ಸ್ ಮತ್ತು ಯು ಮುಂಬಾ ತಂಡಗಳು ಟೂರ್ನಿಯಲ್ಲಿ ಪಾಲ್ಗೊಂಡಿವೆ.